ShriManjunatheshwara Central School,

**S.NO 175, Near GangubaiHangalGurukul, Shivalli Road, Unkal Hubballi.**

MID TERM EXAMINATION (2020-21)

CLASS : *VIII* SUB: KANNADA Marks: 80

ವಿಭಾಗ ಅ – ಬಹು ಆಯ್ಕೆ ಪ್ರಶ್ನೆಗಳು

ವಿಭಾಗ ಆ – ವಿವರಣಾತ್ಮಕ ಪ್ರಶ್ನೆಗಳು

ವಿಭಾಗ ಅ – ಬಹು ಆಯ್ಕೆ ಪ್ರಶ್ನೆಗಳು

**( UNSEEN PASSAGE)** **1*5=5**

I. ಈ ಕೆಳಗಿನ ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ದೇಶದ ಪ್ರಗತಿ, ಜನರ ಉದ್ಧಾರ ಯಾವುದನ್ನು ಅವಲಂಬಿಸಿದೆ ಎನ್ನುವ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ರೀತಿಯ ಉತ್ತರ ನೀಡಬಹುದು. ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ, ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯುತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ ಎಂದೆಲ್ಲಾ ಹೇಳಬಹುದು. ಆದರೆ ನಮ್ಮ ಹಿರಿಯರು ಹೇಳುತ್ತಿದ್ದ ಮಾತುಗಳತ್ತಲೂ ಸ್ವಲ್ಪ ಗಮನ ಹರಿಸಬೇಕು. ದೇಶದ ಪ್ರಗತಿ, ಜನರ ಉದ್ಧಾರ ಅಸಿ, ಮಸಿ, ಕೃಷಿಯನ್ನು ಅವಲಂಬಿಸಿದೆ ಎನ್ನುತ್ತಿದ್ದರು. ಹೀಗೆಂದರೆ ಏನು? ಅಸಿ ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು. ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದುದರಿಂದ ಈ ದೇಶದ ರಕ್ಷಣೆ ಮಾಡುವವರು ಸೈನಿಕರು. ಅವರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ತಾನೆ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು. ಅದಕ್ಕಾಗಿ ಎಷ್ಟೇ ಖರ್ಚಾದರೂ ಚಿಂತೆಯಿಲ್ಲ ಎನ್ನುವರು. ಅದು ಕಾರಣವೋ ಏನೋ, ನಮ್ಮ ದೇಶದ ಬಜೆಟ್ ನಲ್ಲಿ ಹೆಚ್ಚಿನ ಭಾಗ ರಕ್ಷಣಾ ಇಲಾಖೆಗೆ ಮೀಸಲಾಗಿರುವುದನ್ನು ನೋಡಬಹುದು.

ಪ್ರಶ್ನೆಗಳು:

1) ________________ ನಿಜವಾದ ಪ್ರಗತಿ.

ಅ) ಸಾಮಾಜಿಕ ಆ) ವೈಜ್ಞಾನಿಕ ಬೆಳವಣಿಗೆಯೇ ಇ) ನೈತಿಕ ಈ) ಆಡಂಬರ

2) ________________ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಅ) ಚಂದಿರ ಆ) ಚುಕ್ಕೆ ಇ) ಸೂರ್ಯ ಈ) ನಕ್ಷತ್ರ

3) ____________ ಇಲಾಖೆಗೆ ಮೀಸಲಾಗಿರುವುದನ್ನು ನೋಡಬಹುದು.

ಅ) ರಕ್ಷಣಾ ಆ) ಪೋಲಿಸ್ ಇ) ಮಿಲಿಟರಿ ಈ) ಭಾರತ

4) 'ಸಾಧ್ಯ' ವಿರುದ್ಧಾರ್ಥಕ ಪದ ____________

ಅ) ಸಾಧ್ಯವಾದ ಆ) ಅಸಾಧ್ಯ ಇ) ಅನೇಕ ಈ) ಕೆಲವು

5) ಒಂದೊಂದು ಈ ಪದ ಬಿಡಿಸಿ ಬರೆದಾಗ ______________

ಅ) ಒಂದು + ಒಂದು ಆ) ಓದು + ಓದು ಇ) ಒಂದ + ದೊಂದು ಈ) ಒಂದು + ದೊಂದು

1*5=5

( UNSEEN POEM)

II. ಈ ಕೆಳಗಿನ ಪದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ಮೂಡಲ್ ಕುಣಿಗಲ್ ಕೆರೆ ನೋಡೋರ್ಗೊಂದ್ವೈಭೋಗ
ಮೂಡಿ ಬರ್ತಾನೆ ಚೆಂದಿರಾಮು ।
ತಂತ್ರಿಗೆ ನೋಡೋರ್ಗೆ ಎಂಥಾ ಕುಣಿಗಲ್ ಕೆರೆ
ಸಂತೆ ಹಾದಿಲ್ ಕಲ್ಲು ಕಟ್ಟೆ ॥
ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ
ಭಾವ ತಂದಾನು ಬಣ್ಣದ ಸೀರೆ । ತಾನಂದಾನೋ
ಭಾವ ತಂದಾನು ಬಣ್ಣದ ಸೀರೆ ॥

ಆಹಾ ನಿಂಬೆಯ ಹಣ್ಣಿನಂತೆ ತುಂಬಿದ್ ಕುಣಿಗಲ್ ಕೆರೆ
ಅಂದಾ ನೋಡಾಲು ಶಿವ ಬಂದ । ತಾನಂದಾನೋ
ಅಂದಾ ನೋಡಾಲು ಶಿವ ಬಂದ ॥
ಅಂದಾನೆ ನೋಡಾಲು ಶಿವ ಬಂದು ಶಿವಯೋಗಿ
ಕಪ್ಪಕ್ಕಿ ಬಾಯ ಬಿಡುತಾವೆ । ತಾನಂದಾನೋ
ಕಪ್ಪಕ್ಕಿ ಬಾಯ ಬಿಡುತಾವೆ ಬಿಡದಿ
ಗಪ್ಪಾಗೊಂಬಾಳೆ ನಡುಗ್ಯಾವೆ ॥

ಹಾರಕ್ಕೊಂದೂರುಗೋಲು ನೂಕಾಕ್ಕೊಂದೂರುಗೋಲು
ಬೊಬ್ಬೆ ಹೊಡೆದಾವೆ ಬಾಳೆಮೀನು । ತಾನಂದಾನೋ
ಬೊಬ್ಬೆಯ ಹೊಡೆದಾವೆ ಬಾಳೆಮೀನು ಕೆರೆಯಾಗೆ
ದೊಪ್ಪಿಸಾರಂಗ ನಗುತಾವೆ ತಾನಂದಾನೋ ।
ದೊಪ್ಪಿಸಾರಂಗ ನಗುತಾವೆ ॥

ಪ್ರಶ್ನೆಗಳು:

1) ________________ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ.

ಅ) ಸೀಬೆ ಆ) ಬಾಳೆಯ ಇ) ಸೇಬು ಈ) ಪೇರಳೆ

2) ________________ ತಂದಾನು ಬಣ್ಣದ ಸೀರೆ.

ಅ) ಭಾನು ಆ) ಭಾವ ಇ) ಬಾನು ಈ) ಭಾವ

3) ಅಂದಾನೆ ನೋಡಾಲು ________________ ಬಂದು.

ಅ) ಕೆರೆ ಆ) ಶಿವಾ ಇ) ಕಪ್ಪಕ್ಕಿ ಈ) ಬಾಳೆಮೀನು

4) ________________ ದಲ್ಲಿ ಕುಣಿಗಲ್ ಕೆರೆಯಿದೆ.

ಅ) ಉತ್ತರ ಆ) ಪೂರ್ವ ಇ) ಪಶ್ಚಿಮ ಈ) ದಕ್ಷಿಣ

5) ತುಂಬಿದ ಕೆರೆ ________________ ಹೋಲಿಸಲಾಗಿದೆ.

ಅ) ಶಿವ ಆ) ನಿಂಬೆಯ ಹಣ್ಣಿಗೆ ಇ) ಬಣ್ಣದ ಸೀರೆ ಈ) ಯಾವುದೂ ಅಲ್ಲ.

## PART -B

**I.** ಸೂಕ್ತ ಉತ್ತರ ಆಯ್ದು ಬರೆಯಿರಿ. **16x1=16**

1) ಇದು ಸರ್ವನಾಮಕ್ಕೆ ಉದಾಹರಣೆಯಾಗಿದೆ.

ಅ) ಮರ ಆ) ಬೆಂಗಳೂರು ಇ) ಅವನು ಈ) ಕುರುಡ.

2) 'ಶರಚಂದ್ರ" ಎಂಬುದು ಈ ಸಂಧಿಗೆ ಉದಾಹರಣೆ.

ಅ) ಜಶ್ತ್ವ ಸಂಧಿ ಆ) ಶ್ಚುತ್ವ ಸಂಧಿ ಇ) ಗುಣಸಂಧಿ ಈ) ವೃದ್ಧಿಸಂಧಿ

3) ಇದು ಅನುನಾಸಿಕ ಅಕ್ಷರವಾಗಿದೆ.

ಅ) ಸ ಆ) ಮ ಇ) ಕ ಈ) ಷ

4) ಇದು ವಿಜಾತೀಯ ಸಂಯುಕ್ತಾಕ್ಷರವಾಗಿದೆ.

ಅ) ಕಲ್ಲು ಆ) ಚಕ್ರ ಇ) ಮಣ್ಣು ಈ) ಗದ್ದೆ.

5) 'ತಿನ್ನುತ್ತಾನೆ' ಎಂಬುದು ಈ ಕಾಲಕ್ಕೆ ಉದಾಹರಣೆ.

ಅ) ವರ್ತಮಾನ ಕಾಲ ಆ) ಮಳೆಗಾಲ ಇ) ಭವಿಷ್ಯತ್ ಕಾಲ ಈ) ಭೂತಕಾಲ

6) "ಬೆರಗು" ಎಂಬುದರ ಸಮನಾರ್ಥಕ ಪದವಿದು.

ಅ) ಮೆರಗು ಆ) ಹಗುರ ಇ) ಸನಿಹ ಈ) ಆಶ್ಚರ್ಯ

7) 'ಹಳ್ಳಿಯಲ್ಲಿ' ಪದವು ಈ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆ.

ಅ) ಪ್ರಥಮಾ ಆ) ಸಪ್ತಮಿ ಇ) ಷಷ್ಠಿ ಈ) ತೃತೀಯಾ

8) ಹಿಂದು : ಮುಂದು :: ಹಿರಿದು : ____________

ಅ) ಹಳೆಯದು ಆ) ಹೊಸತು ಇ) ಕಿರಿದು ಈ) ಅನ್ನ

9) ಬಾನು : ಆಕಾಶ :: ಭಾನು : ____________

ಅ) ಸೂರ್ಯ ಆ) ಚಂದ್ರ ಇ) ಗಗನ ಈ) ಚಂದಿರ

10) 'ಬೇಗ ಬೇಗ' ____________ ವ್ಯಾಕರಣಾಂಶಕ್ಕೆ ಉದಾಹರಣೆ.

ಅ) ದ್ವಿರುಕ್ತಿ ಆ) ಅನುಕರಣಾವ್ಯಯ ಇ) ಜೋಡಿಪದ ಈ) ಜೋಡುನುಡಿ

11) 'ಅಣ್ಣ' ಇದರ ಬಹುವಚನ ರೂಪ

ಅ) ಅಣ್ಣಗಳು ಆ) ಅಣ್ಣಂದಿರು ಇ) ಅಣ್ಣಗಳನ್ನು ಈ) ಯಾವುದೂ ಅಲ್ಲ.

12) 'ಮಾಡುತ್ತೇನೆ' ಇದರ ಧಾತು ____________

ಅ) ಮಾಡುವೆ ಆ) ಮಾಡುವರು ಇ) ಮಾಡು ಈ) ಮಾಡುವನು

13) 'ಮಹಿಳೆ' ____________ ಗೆ ಉದಾಹರಣೆ.

ಅ) ಸ್ತ್ರೀಲಿಂಗ ಆ) ಪುಲ್ಲಿಂಗ ಇ) ನಪುಂಸಕಲಿಂಗ ಈ) ಯಾವುದೂ ಅಲ್ಲ.

14) 'ರಮೇಶ' ____________ ಗೆ ಉದಾಹರಣೆ.

ಅ) ಸರ್ವನಾಮ ಆ) ನಾಮಪದ ಇ) ಕ್ರಿಯಾಪದ ಈ) ರೂಢನಾಮ.

15) ಅಬ್ಬಾ! ಸುಂದರವಾದ ಮನೆ. ಇಲಿ ಬಳಕೆಯಾಗಿರುವ ಚಿಹ್ನೆ.

ಅ) ಉದ್ಗಾರವಾಚಕ ಆ) ಅಲ್ಪವಿರಾಮ ಇ) ಜೋಡಿ ಉದ್ಧರಣ ಈ) ಪ್ರಶ್ನಾರ್ಥಕ.

16) ' ಗೌಪ್ಯ' ಈ ಪದದ ಸಮನಾರ್ಥಕ ರೂಪ ____________

ಅ) ಗುಟ್ಟು ಆ) ಗುರು ಇ) ಶಿಷ್ಯ ಈ) ಹೊಗಳಿಕೆ

## PART -C

**( SEEN PASSAGE)** **1*5=5**

I. ಕೆಳಗಿನ ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ಇಲ್ಲಿ ಯುರೋಪಿನಲ್ಲಾಗಲಿ, ಅಲ್ಲಿ ಅಮೇರಿಕದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ. ಹಿಂದೆ ಇತ್ತೇನೋ, ಈಗಂತೂ ಇಲ್ಲ. ನೀರು ಸಲೀಸಾಗಿ ಎಲ್ಲೆಂದರಲ್ಲಿ ಪುಕ್ಕಟೆಯಾಗಿ ನಿಮಗೆ ಖಂಡಿತ ಸಿಗದು. ನಮ್ಮಲ್ಲಿಯಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುವುದಿಲ್ಲ. ಬಾಯಾರಿದಾಗ ಈಗಲೂ ಹೋಟೆಲ್

..ಂದಕ್ಕೆ ಹೊಕ್ಕು, ನೀರು ಮಾತ್ರ ಕುಡಿದು ಹೊರ ಬರಬಹುದಾದ ಸವಲತ್ತು ಇಲ್ಲಿಲ್ಲ. ಮನೆಯ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ, 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ನನಗಿನ್ನೂ ನೆನಪಿವೆ. ನಾನು ದಿಲ್ಲಿಗೆ ಬಂದು, ವಿದೇಶಕ್ಕೆ ಹಾರಿದ್ದೆ. ದಿಲ್ಲಿಯಲ್ಲೋ ಧಗೆಧಗೆ ಬಿಸಿಲು. ಆದರೆ ಯಾರೋ ಪುಣ್ಯಾತ್ಮರು ಅಲ್ಲಿ ದೊಡ್ಡ ದೊಡ್ಡ ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು. ಅನೇಕ ಗುರುದ್ವಾರಗಳ ಬಳಿ ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನೂ ನೋಡಿದ್ದೇನೆ. ರೋತಕ್ ರಸ್ತೆಯ ಅತ್ತೆಯ ಮನೆಯೊಳಗೆ ಕಾಲಿಡುತ್ತಿದ್ದಂತೆ, "ಬೇಟಾ ತಾಯಾಜಿ ಆಯೆ ಹೈ, ಥಂಡಾ ಪಾನಿ ಪಿಲಾವೋ" ನನ್ನ ಮೈದುನನ ಮಗನಿಗೆ ಅತ್ತೆ ಕೂಗಿ ಹೇಳಿದರು. ಪುಟ್ಟ ಹುಡುಗ ತತ್‌ಕ್ಷಣ 'ತಣ್ಣನೆಯ ನೀರು' ತಂದು ಕೈಗಿಟ್ಟ. ದಿಲ್ಲಿಯ ಧೂಳು ಹಾದಿಗಳೆಲ್ಲ ಮರೆತವು. ಮನೆಗೆ ಬಂದವರಿಗಂತೂ 'ಮೊದಲು ನೀರು ಕೊಡುವ' ಸಂಪ್ರದಾಯ. ಡಾಬಾ ಆಗಲಿ, ದರ್ಶಿನಿ ಆಗಲಿ, ಪಂಚತಾರಾ ಹೋಟಲೇ ಆಗಲಿ ಮೊದಲು ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ. ಪುಕ್ಕಟೆಯಾಗಿ ಕೊಡುವ ನೀರು. ಆದರೆ ನಾನೀಗ 'ನೀರು ಕೊಡದ ನಾಡು'ಗಳಲ್ಲಿ ಅಲೆಯುತ್ತಿದ್ದೇನೆ.

1) ____________________ ನಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ.

ಅ) ಭಾರತ ಆ) ಯುರೋಪ ಇ) ಅಮೇರಿಕಾ ಈ) ಆ ಮತ್ತು ಇ ಎರಡೂ

2) ______________ ಕುಡಿಯಬಲ್ಲ ನೀರನ್ನು ಇರಿಸುವುದಿಲ್ಲ.

ಅ) ಕಾಸಿಲ್ಲದೆ ಆ) ದುಡ್ಡಿಲ್ಲದೆ ಇ) ನೀರನ್ನು ಈ) ಕುಡಿಯಲು

3) __________ ರಸ್ತೆಯಲ್ಲಿ ಅತ್ತೆಯ ಮನೆಯಿತ್ತು.

ಅ) ಎಂ.ಜಿ. ರೋಡ್ ಆ) ರೋತಕ್ ಇ) ಬೆಂಗಳೂರು ಈ) ಯುರೋಪ

4) 'ವಿಮಾನ' ಈ ಪದದಲ್ಲಿ __________ ವಿಭಕ್ತಿ ಪ್ರತ್ಯಯ ಹೊಂದಿದೆ.

ಅ) ಪ್ರಥಮಾ ಆ) ದ್ವಿತೀಯಾ ಇ) ಷಷ್ಠಿ ಈ) ಸಪ್ತಮೀ

5) "ಪುಣ್ಯಾತ್ಮರು" ಬಿಡಿಸಿ ಬರೆದಾಗ __________

ಅ) ಪುಣ್ಯ + ಆತ್ಮರು ಆ) ಪುಣ್ಯಾ + ಆತ್ಮರು ಇ) ಪುಣ್ಯಾ + ತ್ಮರು ಈ) ಪುಣ್ಯದ + ಆತ್ಮರು

( SEEN POEM ) 1*5=5

II.ಈ ಕೆಳಗಿನ ಪದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.

ನಟ್ಟಿರುಳ ಕರಿಮುಗಿಲ ನೀರ್-ತುಂಬಿಗಳ ನಡುವೆ
ಹುಣ್ಣಿಮೆಯ ಕಣ್ಣು ತೆರೆದಿದೆ. ತಾರೆ ಬಂದಿವೆ
ಬಾನ ಬೀದಿಗೆ. ಅತ್ತ ಹಿಡಿದ ಸೋನೆಯ ಶ್ರುತಿಗೆ
ಗಾಳಿಯೇ ಹಾಡುತಿದೆ. ಇತ್ತ ಈ ಮನೆಯೊಳಗೆ

1) 'ನಟ್ಟಿರುಳ' ಎಂದರೆ __________

ಅ) ಮುಂಜಾನೆ ಆ) ಮಧ್ಯಾಹ್ನ ಇ) ಸಾಯಂಕಾಲ ಈ) ಬೆಳಿಗ್ಗೆ

2) ಕರಿಮುಗಿಲು ಬಿಡಿಸಿ ಬರೆದಾಗ ____________

ಅ) ಕರಿ + ಮುಗಿಲ ಆ) ಕಪ್ಪು + ಮುಗಿಲು ಇ) ಕಪ್ಪಿನ + ಮುಗಿಲು ಈ) ಕಪ್ಪು + ಮುಗಿಲ

3) ಸೋನೆಯ ಎಂದರೆ ____________

ಅ) ಗಾಳಿ ಆ) ಮಳೆ ಇ) ಬಿಸಿಲು ಈ) ಚಳಿ

4) 'ಮನೆಯೊಳಗ' ____________ ಸಂಧಿಗೆ ಸೇರಿದೆ.

ಅ) ಆಗಮ ಸಂಧಿ ಆ) ಲೋಪ ಸಂಧಿ ಇ) ಸವರ್ಣ ಸಂಧಿ ಈ) ಗುಣಸಂಧಿ

5) ಹುಣ್ಣಿಮೆಯ ____________ ತೆರೆದಿದೆ.

ಅ) ಕಣ್ಣು ಆ) ಕಿವಿ ಇ) ಮೂಗು ಈ) ಬಾಯಿ

ವಿಭಾಗ ಆ – ವಿವರಣಾತ್ಮಕ ಪ್ರಶ್ನೆಗಳು

**( A section)**

**I.** ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ. ( ಬೇಕಾದ 4ಕ್ಕೆ) **4*2=8**

1) ಬಾಗಲೋಡಿ ದೇವರಾಯರ ಕಾಲ ಮತ್ತು ಸ್ಥಳ ಬರೆಯಿರಿ.

2) ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದರು?

3) ಚೋಳರ ಸಾಧನೆಯೇನು?

4) ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?

5) ಕವಿ ಯಾವ ಸಣ್ಣ ಸಂಗತಿಯನ್ನು ಈ ಕವನದಲ್ಲಿ ವಿವರಿಸಿದ್ದಾರೆ?

6) ಅಬ್ದುಲ್ ರಹೀಮನ ಹಠವೇನು?

**II.** ಐದು ಆರು ವಾಕ್ಯಗಳಲ್ಲಿ ಉತ್ತರಿಸಿ. ( ಬೇಕಾದ 4ಕ್ಕೆ) **4*2=8**

1)' ಮಗ್ಗವಲ್ಲ ಕೊರಳಿಗೆ ಹಗ್ಗ' ಸಂದರ್ಭ ಸಹಿತ ವಿವರಿಸಿ.

2) ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ ಬಗ್ಗೆ ಆದ ಅನುಭವ ವಿವರಿಸಿ.

3) ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?

4) 'ನಿನ್ನ ಕಲ್ಲೇ ನುಡಿವುದಲ್ಲ' ವಿವರಿಸಿ.

5) 'ತಾರೆ ಬಂದಿವೆ ಬಾನ ಬೀದಿಗೆ' ವಿವರಿಸಿ.

III. ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ( ಬೇಕಾದ 1 ಕ್ಕೆ) 1*4=4

1) ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.

2) ಕವಿ ಯಾವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ಘಟನೆಗಳೊಂದಿಗೆ ಹೋಲಿಕೆ ಮಾಡಿದ್ದಾರೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ( B- section) ಪಠ್ಯ ಪೂರಕ ಅಧ್ಯಯನ

I. ಒಂದು ವಾಕ್ಯದಲ್ಲಿ ಉತ್ತರಿಸಿ.( ಬೇಕಾದ 4 ಕ್ಕೆ) 4*1=4

1) ಚುಟುಕು ಬ್ರಹ್ಮ ಯಾರು?

2) ಗಾಳಿಯಲ್ಲಿ ಬೂದಿಯನ್ನು ತುರಿದಾಗ ಎಲ್ಲಿ ಬೀಳುತ್ತದೆ?

3) ದೇಹ ಏಕೆ ವ್ಯರ್ಥವಾಗಿದೆ?

4) ನಮ್ಮೆದೆಯ ಕಾಮಧೇನು ಯಾವುದು?

5) ಕೋಡೆಗೋಡೆಗೆ ಮೆಟ್ಟಿಲುಗಳು ಯಾವುದು?

## ( C- section) 3*4=12

II. 1) ನಿಮ್ಮ ವಿದ್ಯಾಭ್ಯಾಸ ಕುರಿತು ತಂದೆಗೆ ಪತ್ರ ಬರೆಯಿರಿ.

2) ಗಾಂಧಿ ಜಯಂತಿ ಕುರಿತು ಪ್ರಬಂಧ ಬರೆಯಿರಿ.

3) ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕುರಿತು ವರದಿ ತಯಾರಿಸಿರಿ.

4) ನೀವು ಕೈಗೊಂಡ ಪ್ರವಾಸ ಕುರಿತು ಪ್ರಬಂಧ ಬರೆಯಿರಿ.